# ಶಿಶು ಬಾಪ್ತಿಸ್ಮದ ಬಗ್ಗೆ ಏನು?

ಶಿಶುಗಳು ಬಾಪ್ತಿಸ್ಮ ಮಾಡಿಸಲ್ಪಡ ಬೇಕೆಂದು ನಂಬುವವರಿಂದ ಈ ಕೆಳಗಿನ ಪ್ರಶ್ನೆಗಳು ಮೇಲಿಂದ ಮೇಲೆ ಕೇಳಲ್ಪಡುತ್ತವೆ.

**ಪ್ರಶ್ನೆ: ಎಲ್ಲಾ ಶಿಶುಗಳು ಪಾಪದಲ್ಲಿ ಹುಟ್ಟಿರುವವೋ?**

ಉತ್ತರ: ಇಲ್ಲ. ಪಾಪಭರಿತ ಜಗತ್ತಿನಲ್ಲಿ ಶಿಶುಗಳು ಜನಿಸಿರುವವು, ಆದರೆ ಇದು ಅವುಗಳನ್ನು ಪಾಪಿಗಳನ್ನಾಗಿ ಮಾಡುವದಿಲ್ಲ. ಒಂದು ಮಗು ಒಂದು ಉಗ್ರಾಣದಲ್ಲಿ ಜನಿಸಿದರೆ, ಅದು ಅವನನ್ನು ಒಂದು ಹಸುವನ್ನಾಗಿ ಮಾಡುವದಿಲ್ಲ. ದಾವೀದನು ಕೀರ್ತನೆ 51:5ರಲ್ಲಿ "ಹುಟ್ಟಿದಂದಿನಿಂದ ನಾನು ಪಾಪಿಯೇ; ಮಾತೃರ್ಗಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ" ಎಂದು ಬರೆದನು (ವಚನ 5). ಇದು ಅಕ್ಷರಶಃ ಭಾಷಾಂತರವಾಗಿದೆ. ಇದು ದಾವೀದನ ಜನನದ ಸುತ್ತು ಮುತ್ತಲಿನ ವಾತಾವರಣವನ್ನು ಕೊಡುತ್ತದೆ, ಆದರೆ ಅವನು ಪಾಪಿಯಾಗಿ ಜನಿಸಿದ್ದನ್ನು ನಮೂದಿಸುವದಿಲ್ಲ. ಕೆಲವು ಬೈಬಲ್ ಭಾಷಾಂತರಕಾರರು ಇಬ್ರಿಯ ಮೂಲಪಾಠವನ್ನು ಕಡೆಗಣಿಸಿ[1] ದಾವೀದನು ಪಾಪಿಯಾಗಿ ಜನಿಸಿದನೆಂದು ಬರೆಯುತ್ತಾರೆ. ಇದು ದುರ್ದೈವದ ಸಂಗತಿಯಾಗಿದೆ.

**ಪ್ರಶ್ನೆ: ಪ್ರತಿಯೊಬ್ಬ ವ್ಯಕ್ತಿಯು ಆದಾಮನ ಪಾಪದ ಅಪರಾಧವನ್ನು ಹೊತ್ತುಕೊಂಡಿರುವನೋ?**

ಉತ್ತರ: ಇಲ್ಲ. ಆದಿಕಾಂಡ ಗ್ರಂಥವು, ಮರಣ (3:3, 19), ಶಿಶು ಜನನದಲ್ಲಿ ನೋವು (3:16) ಮತ್ತು ಶಪಿಸಲ್ಪಟ್ಟಂಥ ಭೂಮಿ (3:17) ಇಂಥ ಪಾಪದ ಕಾರ್ಯಫಲಗಳ ಬಗ್ಗೆ ಹೇಳುತ್ತದೆ, ಆದಾಮನ ಮತ್ತು ಹವ್ವಳ ಪಾಪದ ಕಾರ್ಯಫಲಗಳನ್ನು ನಾವು ಸಹಿಸುತ್ತೇವೆ. ಆದರೆ ನಾವು ಅವರ ಅಪರಾಧವನ್ನು ಬಾಧ್ಯವಾಗಿ ಹೊಂದಿಕೊಳ್ಳುವದಿಲ್ಲ. ನೈತಿಕ ಆಯ್ಕೆಗಳನ್ನು ಮಾಡುವ ಸಾಮರ್ಥ್ಯ ನಮಗಿದೆ; ದೇವರ ವಾಕ್ಯದೊಂದಿಗೆ ಸಾಮರಸ್ಯದಲ್ಲಿರುವ ಆಯ್ಕೆಗಳನ್ನು ಮಾಡುವಲ್ಲಿ ನಾವು ಸೋತುಹೋಗುವಾಗ, ನಾವು ಪಾಪದ ಅಪರಾಧಿಗಳಾಗುತ್ತೇವೆ.

**ಪ್ರಶ್ನೆ: ಶಿಶುಗಳು ದೇವರ ರಾಜ್ಯದಿಂದ ಬೇರೆಯಾಗಿ ಜನಿಸಿರುವವೋ?**

ಉತ್ತರ: ಇಲ್ಲ. ಅವುಗಳನ್ನು ಕುರಿತು ಯೇಸುವು, "ಪರಲೋಕ ರಾಜ್ಯವು ಇಂಥವರದೇ" ಎಂದು ಹೇಳಿದನು (ಮತ್ತಾಯ 19:14).

**ಪ್ರಶ್ನೆ: ಚಿಕ್ಕಮಕ್ಕಳು ತಮ್ಮ ತಂದೆತಾಯಿಗಳ ಪಾಪಗಳನ್ನು ಹೊತ್ತುಕೊಳ್ಳುವರೋ?**

ಉತ್ತರ: ಇಲ್ಲ. "ಮಗನು ತಂದೆಯ ದೋಷಫಲವನ್ನು ಅನುಭವಿಸುವದಿಲ್ಲ; ತಂದೆಯು ಮಗನ ದೋಷಫಲವನ್ನು ಅನುಭವಿಸುವದಿಲ್ಲ; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ" (ಯೆಹೆಜ್ಕೇಲ 18:20). ಪ್ರತಿಯೊಬ್ಬ ವ್ಯಕ್ತಿಯ ನೀತಿಯು ಇಲ್ಲವೇ ದುಷ್ಟತ್ವವು ಅವನ ಮೇಲೆ ಇರುವದರಿಂದ, ನ್ಯಾಯತೀರ್ಪು ಪ್ರತಿಯೊಬ್ಬನು ಮಾಡಿದ ಕಾರ್ಯಗಳ ಮೇಲೆ ಅವಲಂಭಿಸಿರುವುದು. ಒಬ್ಬ ವ್ಯಕ್ತಿಯ ನೀತಿಯು ಇಲ್ಲವೇ ದುಷ್ಟತ್ವವು ಇನ್ನೊಬ್ಬನ ಲೆಕ್ಕಕ್ಕೆ ಎಣಿಸಲ್ಪಡುವದಿಲ್ಲ.

**ಪ್ರಶ್ನೆ: ಅಪೊಸ್ತಲರ ಕೃತ್ಯಗಳ ದಾಖಲೆಯಾದ ಕುಟಂಬಗಳ ಮಾರ್ಪಡುವಿಕೆಯಲ್ಲಿ ಶಿಶುಗಳು ಒಳಗೊಂಡಿದ್ದವೋ?**

ಉತ್ತರ: ಇಲ್ಲ. ಸಾಂಬಂಧಿಕವಾಗಿ ಕೆಲವೇ ಕುಟುಂಬಗಳಲ್ಲಿ ಶಿಶುಗಳಿರುತ್ತವೆ. ಮನೆಯವರು "ದೇವರಿಗೆ ಭಯ ಪಡುವವರು" (ಅಪೊಸ್ತಲರ ಕೃತ್ಯಗಳು 10:2). ಮತ್ತು "ನಂಬಿದವರು" (ಅಪೊಸ್ತಲರ ಕೃತ್ಯಗಳು 16:34; 18:8) ಆಗಿದ್ದರೆಂದು ಹೇಳಲ್ಪಟ್ಟಿದೆ. ಲುದ್ಯಳಿಗೆ ಮಕ್ಕಳಾಗಲೀ, ಗಂಡನಾಗಲೀ ಇದ್ದರೆಂಬುದನ್ನು ಯಾವುದೂ ಸೂಚಿಸುವದಿಲ್ಲ (ಅಪೊಸ್ತಲರ ಕೃತ್ಯಗಳು 16:14, 15). ಚಿಕ್ಕವರು ಮನೆಯವರಿಂದ ಬೇರೆ ಯಾಗಿ ಎಣಿಸಲ್ಪಡುತ್ತಿದ್ದರು (ನೋಡಿರಿ ಆದಿಕಾಂಡ 47: 24). ಶಿಶುಗಳು ಬಾಪ್ತಿಸ್ಮ ಮಾಡಿಸಿಕೊಂಡ ಯಾವುದೇ ಉದಾಹರಣೆ ಬೈಬಲಿನಲ್ಲಿ ಕಂಡುಬರುವದಿಲ್ಲ. ಇದಕ್ಕೆ ವಿರುದ್ಧವಾಗಿ, ಅಪೊಸ್ತಲರ ಕೃತ್ಯಗಳು 8:12ರ ಪ್ರಕಾರವಾಗಿ, ಬಾಪ್ತಿಸ್ಮ ಹೊಂದಿದವರು "ಪುರುಷರೂ ಮತ್ತು ಸ್ತ್ರೀಯರೂ" ಆಗಿದ್ದರು.

**ಪ್ರಶ್ನೆ: ಬಾಪ್ತಿಸ್ಮ ಮಾಡಿಸುವದರಿಂದ ಶಿಶುಗಳು ದೇವರಿಗೆ ಸಮರ್ಪಿಸಲ್ಪಡುವ ಅಗತ್ಯತೆ ಇರುವುದೋ?**

ಉತ್ತರ: ಇಲ್ಲ. ಚಿಕ್ಕಮಕ್ಕಳು ಯೇಸುವಿನ ಸನ್ನಿಧಿಯಲ್ಲಿ ತಮ್ಮ ಯಥಾರ್ಥತೆಯ ಸ್ಥಿತಿಯಲ್ಲಿ "ಸುರಕ್ಷಿತವಾಗಿದ್ದರೆ" ಬಾಪ್ತಿಸ್ಮದಲ್ಲಿ ದೇವರಿಗೆ ಸಮರ್ಪಿಸಲ್ಪಡಬೇಕೆಂದು ಕೇಳಿಕೊಳ್ಳುವುದು ಮಾನವ ಸಂಪ್ರದಾಯವಾಗಿದೆ. ಇಂಥ ಮಾನವ ಸಂಪ್ರದಾಯಗಳಿಗೆ ಕ್ರೈಸ್ತರು ಎಚ್ಚರಿಕೆಯಿಂದ ಇರಬೇಕು (ಕೊಲೊಸ್ಸೆ 2:8).

**ಪ್ರಶ್ನೆ: ಹಳೇ ಒಡಂಬಡಿಕೆಯಲ್ಲಿ ಶಿಶುಗಳಿಗೆ ಸುನ್ನತಿಯಾಗುತ್ತಿದ್ದುದರಿಂದ, ಶಿಶುಗಳಿಗೆ ಬಾಪ್ತಿಸ್ಮ ಮಾಡಿಸಬಾರದೇ?**

ಉತ್ತರ: ಇಲ್ಲ. ಈ ಯೋಚನೆಯು ಬೆಲೆಯುಳ್ಳದ್ದಾಗಿದ್ದರೆ, ಆಗ ಸುನ್ನತಿಯಿಲ್ಲದ ಮಕ್ಕಳಂತೆ (ಆದಿಕಾಂಡ 17:14), ಪ್ರತಿಯೊಂದು ಬಾಪ್ತಿಸ್ಮ ಹೊಂದದ ಮಗುವು ತನ್ನ ಜನರಿಂದ ಹೊರಗೆ ಹಾಕಲ್ಪಡತಕ್ಕದ್ದು. ಬಾಪ್ತಿಸ್ಮವು, ಪಾಪಗಳ ಕ್ಷಮಾಪಣೆಗಾಗಿ ಇದ್ದು (ಅಪೊಸ್ತಲರ ಕೃತ್ಯಗಳು 2:38), ಸುನ್ನತಿಯಂಥ ಅದೇ ಉದ್ದೇಶವನ್ನು ನೆರವೇರಿಸಲಾರದು, ಸುನ್ನತಿಯು ದೇವರಿಗೂ ಮತ್ತು ಅಬ್ರಹಾಮನಿಗೂ ಮಧ್ಯದಲ್ಲಿ ಒಡಂಬಡಿಕೆಯ ಸಂಕೇತವಾಗಿತ್ತು (ಆದಿಕಾಂಡ 17:11). ಬಾಪ್ತಿಸ್ಮ ಹೊಂದುವವರಿಂದ ಆಗತ್ಯವಾದದ್ದನ್ನು ಶಿಶುಗಳು ಮಾಡಲಾರವು. ಬಾಪ್ತಿಸ್ಮ ಹೊಂದಿದ ಜನರಿಗೆ ಸುವಾರ್ತೆಯು ಸಾರಲ್ಪಡಬೇಕಾಗಿತ್ತು. ಅವರು ಸುವಾರ್ತೆಯನ್ನು ನಂಬತಕ್ಕದ್ದು (ಮಾರ್ಕ 16:15, 16), ಮಾನಸಾಂತರ ಪಡಬೇಕು (ಅಪೊಸ್ತಲರ ಕೃತ್ಯಗಳು 2:38), ಮತ್ತು ನೂತನ ಜೀವನ ಜೀವಿಸಬೇಕು (ರೋಮಾಪುರ 6:4). ಅಪೊಸ್ತಲರ ಕೃತ್ಯಗಳಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡವರು ದೇವರ ವಾಕ್ಯವನ್ನು ಕೇಳಿದರು ಮತ್ತು ಸ್ವೀಕರಿಸಿದರು, ನಂಬಿದರು ಹಾಗೂ ಮನಸಾಂತರ ಪಟ್ಟರು ಎಂದು ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 2:41; 8:12; 18:8). ಶಿಶುಗಳಿಗೆ ಪಾಪವಿರುವದಿಲ್ಲ ಮತ್ತು ಅಗತ್ಯವಾದದ್ದನ್ನು ಅವು ನೆರವೇರಿಸಲಾರವು, ಆದುದರಿಂದ ಅವುಗಳಿಗೆ ಬಾಪ್ತಿಸ್ಮ ಮಾಡಿಸಬಾರದು.

ಶಿಶುವಾಗಿ ಬಾಪ್ತಿಸ್ಮ ಹೊಂದಿದವನು ಕ್ರೈಸ್ತನಾಗಲಿಕ್ಕೆ ಮೊದಲಿನ ವಯಸ್ಸಿನಲ್ಲಿ ಅಗತ್ಯವಾದ ವಿಶ್ವಾಸವಿರಲಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಒಂದು ಶಿಶುವು ಯೇಸುವಿನ ರಕ್ತವು ನಮ್ಮನ್ನು ನಮ್ಮ ಪಾಪಗಳಿಂದ ಶುದ್ಧೀಕರಿಸುವದೆಂಬುದನ್ನು ಅರ್ಥಮಾಡಿಕೊಳ್ಳಲಾರದು (ರೋಮಾಪುರ 3:25); ಅದು ಮಾನಸಾಂತರ ಪಟ್ಟು ತನ್ನ ಜೀವಿತವನ್ನು ಯೇಸುವಿನ ಸೇವೆ ಮಾಡಲಿಕ್ಕೆ, ಆತನನ್ನು ಹಿಂಬಾಲಿಸಲಿಕ್ಕೆ

ಶಕ್ತಿಯಿಲ್ಲದ್ದಾಗಿರುವುದು (ಯೋಹಾನ 12:26). ಬಾಪ್ತಿಸ್ಮ ಹೊಂದುವ ವ್ಯಕ್ತಿಯು ಯೇಸುವಿನ ಶಿಷ್ಯನಾಗಲು ತನ್ನನ್ನು ಸಮರ್ಪಿಸಿಕೊಳ್ಳುವನು (ಮತ್ತಾಯ 28:19). ಅಂಥ ಸಮರ್ಪಣೆಯನ್ನು ಮಾಡಿಕೊಳ್ಳುವವರು, ತಾವು ಕ್ಷಮಿಸಲ್ಪಡುವವರು ಮತ್ತು ಯೇಸುವಿಗಾಗಿ ನೂತನ ಜೀವಿತ ಜೀವಿಸಲು ಬಾಪ್ತಿಸ್ಮ ಹೊಂದಬೇಕು.

**ಪ್ರಶ್ನೆ: ಮಕ್ಕಳು ತಮ್ಮ ತಂದೆತಾಯಿಗಳ ಪಾಪಗಳ ಕಾರಣದಿಂದ ಅಪರಾಧಿಗಳಾಗಿರುವರೋ?**

ಉತ್ತರ: ಇಲ್ಲ. ತಮ್ಮ ತಂದೆ ತಾಯಿಗಳ ಪಾಪಗಳ ಕಾರಣದಿಂದ ಮಕ್ಕಳು ಶ್ರಮೆಹೊಂದಬಹುದು (ವಿಮೋಚನಕಾಂಡ 20:5). ಹೀಗಿದ್ದರೂ, ದೇವರು, "ತನ್ನನ್ನು ಪ್ರೀತಿಸಿ ತನ್ನ ಆಜ್ಞೆಗಳನ್ನು ಅನುಸರಿಸುವವರಿಗೆ ಮಾಡಿದ ವಾಗ್ದಾನವನ್ನೂ ಕೃಪೆಯನ್ನೂ ಅವರ ಸಂತತಿಯವರಲ್ಲಿ ಸಾವಿರ ತಲೆಗಳ ವರೆಗೂ ನೆರವೇರಿಸುವನು" (ಧರ್ಮೋಪ ದೇಶಕಾಂಡ 7:9ಬಿ). ಅವರು ತಮ್ಮ ಪಾಪಗಳ ನಿಮಿತ್ತ ಅಪರಾಧಿಗಳಾಗಿದ್ದರೆ, ಅವರು ವಿಧೇಯರ ಸಾವಿರದ ತಲಾಂತರಕ್ಕೆ ನೀತಿವಂತರಾಗಿರುವರು.

---

ಟಿಪ್ಪಣಿ

[1]The translation in question is used in the NIV, the NRSV, and the New Jerusalem Bible.

© 2009 Truth for Today